ಸಾಕ್ಷಿಯನ್ನು ದಿನಾಂಕಃ 26.9.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಜಿ ಎಸ್ ವಿ ವಕೀಲರಿಂದ

ಪ್ರತಿವಾದಿಗಳು ನನ್ನ ಸಂಬಂಧಿಕರಲ್ಲ. ಚಿಕ್ಕವೆಂಕಟಪ್ಪ ಅಲಿಯಾಸ್ ಚಿಕ್ಕ ವೆಂಕಟರೆಡ್ಡಿ ಎಂಬುವವರು ಒಬ್ಬರೇ ಎಂದು ಹೇಳುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ. ದಾವಸ್ವತ್ತಿನ ಸ ನಂ 35/ಪಿ23 ಪೋಡಿಯಾಗಿರುವುದಿಲ್ಲ. ದಾವಸ್ವತ್ತು ಮೂಲತಃ ಚಿಕ್ಕವೆಂಕಟಪ್ಪ ರವರ ಹೆಸರಿನಲ್ಲಿರುತ್ತದೆ. ವಾದಿ ಆರೋಗ್ಯವಾಗಿ ಇದ್ದು ಬೆಳಿಗ್ಗೆ ನ್ಯಾಯಾಲಯಕ್ಕೆ ಬಂದಿರುತ್ತಾರೆಂದರೆ ಸಾಕ್ಷಿಯು ಲೋ ಬಿ ಪಿ ಇರುತ್ತದೆ ಮತ್ತು ನ್ಯಾಯಾಲಯಕ್ಕೆ ಬಂದಿರುವ ಬಗ್ಗೆ ನೋಡಿಲ್ಲ ಎಂದು ನುಡಿಯುತ್ತಾರೆ. ವಾದಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಹೊರಬರುವ ಕಾರಣ ಮರೆ ಮಾಚಿ ಜಿಪಿಎ ತೆಗೆದು ಕೊಂಡಿರುತ್ತೇನೆಂದರೆ ಸರಿಯಲ್ಲ.

2. ನಿಪಿ2 ರ ಕ್ರಯಪತ್ರದಲ್ಲಿ ಖಾತಾ ನಂ 35 ಮಾತ್ರ ನಮೂದಾಗಿರುತ್ತದೆ. ನಿಪಿ27 ರ ಕ್ರಯಪತ್ರದಂತೆ ಸ ನಂ 35 ಪೋಡಿಯಾಗಿ 35 ಪಿ23 ಆಗದೇ ಇದ್ದರೂ ಸಹ ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ27 ರ ಕ್ರಯಪತ್ರದ ದಕ್ಷಿಣಕ್ಕೆ ಬೈಯಾರೆಡ್ಡಿ ಎಂಬುವವರೇ 2 ನೇಪ್ರತಿವಾದಿ ಎಂದರೆ ಸರಿ. ನಿಪಿ 13 ರಿಂದ 21 ರ ಭಾವಚಿತ್ರಗಳಲ್ಲಿರುವ ಜಮೀನು ಮತ್ತು ಬೋರ್ ವೆಲ್ 2 ನೇಪ್ರತಿವಾದಿಗೆ ಸೇರಿದ ಸ ನಂ 15/4 ರ ಜಮೀನು ಎಂದರೆ ಸರಿಯಲ್ಲ. ಸ ನಂ 15/1, 15/2, 15/4 ರ ಜಮೀನಿಗೂ ನನಗೂ ಸಂಬಂಧ ಇಲ್ಲ. ಸದರಿ ಜಮೀನುಗಳ ಸ್ವಾಧೀನದಲ್ಲಿಯೂ ಇರುವುದಿಲ್ಲ ಎಂದರೆ ಸರಿ. ನಾನು ಕೇಳುವ ದಾಳಿಂಬೆ ಗಿಡಗಳು 2 ನೇಪ್ರತಿವಾದಿಯ ಸ ನಂ 15/4 ರಲ್ಲಿರುತ್ತದೆ ಎಂದರೆ ಸರಿಯಲ್ಲ. ನಿಪಿ21 ರ ಬೋರ್ ವೆಲ್ ನನಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇಳುವ ದಾವಸ್ವತ್ತು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಿಕ್ಕವೆಂಕಟಪ್ಪ ರವರ ವಾರಸುದಾರರು ವೆಂಕಟಾಚಲಪತಿ ಸ ನಂ 35 ಅನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಸ್ವತ್ತಿನ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ13 ರಿಂದ 21 ರ ಭಾವಚಿತ್ರಗಳು 2 ನೇಪ್ರತಿವಾದಿಯ ಸ ನಂ 15/4 ಸಂಬಂಧಿಸಿರುವ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿ ಸಾಕ್ಷ್ಯವನ್ನು

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳುವಂತೆ ಚಿಕ್ಕವೆಂಕಟಪ್ಪ ಎಂಬುವವರು 40 ವರ್ಷಗಳ ಹಿಂದೆ ಮೃತರಾಗಿದ್ದರೂ ಸಹ ದಿಃ 24.12.94 ರ ಕ್ರಯಪತ್ರವನ್ನು ವೆಂಕಟಾಚಲಪತಿ ರೆಡ್ಡಿ ಆಗಿರುತ್ತದೆ ಎಂದು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ.

3. ಪ್ರತಿವಾದಿಗಳು ತೊಂದರೆ ಮಾಡಿರುವ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುವುದಿಲ್ಲ. ನನಗೂ ಪ್ರತಿವಾದಿಗಳಿಗೂ ದಾವಸ್ವತ್ತಿನ ವಿಚಾರವಾಗಿ ಜಗಳ ವಾಗಿಲ್ಲ. ಪ್ರತಿವಾದಿಗಳು ನಾನು ಕೇಳು ದಾವಸ್ವತ್ತಿಗೆ ಯಾವತ್ತೂ ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಸೇರಿದ ದಾವಸ್ವತ್ತಿನ ದಕ್ಷಿಣಕ್ಕೆ ಇರುವ ಸ ನಂ 15/1, 15/2, 15/4 ರ ಜಮೀನುಗಳಿಗೆ ತೊಂದರೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರಿಗೆ ಸೇರಿದ ಜಮೀನನ್ನು ಹೊಡೆದು ಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.